International Journal of Applied Research 2020; 6(9): 83-87




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2020; 6(9): 83-87
www.allresearchjournal.com
Received: 04-07-2020
Accepted: 06-08-2020

**ಡಾ.ವೆಂಕಟೇಶ.ಟಿ.ಎಸ್.**
ತಗಚಗೆರೆ, ಚನ್ನಪಟ್ಟಣ ತಾಲ್ಲೂಕು,ರಾಮನಗರ ಜಿಲ್ಲೆ–೫೬೨೧೬೦

**ಡಾ.ಎಲ್.ಪಿ.ರಾಜು**
ಪ್ರಾಧ್ಯಾಪಕರು
ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವ ವಿದ್ಯಾಲಯ, ತುಮಕೂರು–೫೭೨೧೦೩

**Corresponding Author:**
**ಡಾ.ವೆಂಕಟೇಶ.ಟಿ.ಎಸ್.**
ತಗಚಗೆರೆ, ಚನ್ನಪಟ್ಟಣ ತಾಲ್ಲೂಕು,ರಾಮನಗರ ಜಿಲ್ಲೆ–೫೬೨೧೬೦

# ಶಾಸನಗಳ ಹಿನ್ನಲೆಯಲ್ಲಿ ಹೊಯ್ಸಳರ ನೆಲೆಯಾಗಿ ಚನ್ನಪಟ್ಟಣ ತಾಲ್ಲೂಕು

**ಡಾ.ವೆಂಕಟೇಶ.ಟಿ.ಎಸ್. ಡಾ.ಎಲ್.ಪಿ.ರಾಜು**

**ಪೀಠಿಕೆ**

ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಹೊಯ್ಸಳ ಅರಸು ಮನೆತನ ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಮೂರು ಶತಮಾನಗಳ ಕಾಲ ರಾಜ್ಯಭಾರ ಮಾಡಿದವರು. ನಮಗೆಲ್ಲ ತಿಳಿದಿರುವಂತೆ ಹೊಯ್ಸಳರ ರಾಜ್ಯ ಸ್ಥಾಪಕ ಸಳ. ಈತನ ಆಳ್ವಿಕೆಯ ನಂತರ ಹೊಯ್ಸಳ ರಾಜ್ಯವನ್ನು ಒಂದನೆಯ ವಿನಯಾದಿತ್ಯ, ನೃಪಕಾಮ, ಇಮ್ಮಡಿ ವಿನಯಾದಿತ್ಯ, ಎರೆಯಂಗ, ಒಂದನೇ ಬಲ್ಲಾಳರು ಆಳ್ವಿಕೆ ನಡೆಸಿದ್ದಾರೆ. ಹೊಯ್ಸಳರ ಅರಸರಲ್ಲೇ ಪ್ರಖ್ಯಾತನಾದ ವಿಷ್ಣುವರ್ಧನನು ತನ್ನ ಅಣ್ಣ ಒಂದನೇ ಬಲ್ಲಾಳನ ನಂತರ ಕ್ರಿ.ಶ.೧೧೦೮ ರಿಂದ ೧೧೪೮ರವರೆಗೆ ಹೊಯ್ಸಳ ಸಾಮ್ರಾಜ್ಯವನ್ನು ಆಳ್ವಿಕೆ ಮಾಡಿದ್ದಾನೆ. ಈತನ ಆಳ್ವಿಕೆಯ ಕಾಲದಲ್ಲಿಯೇ ಚೋಳರ ಅಧಿಯಮನನ್ನು ಹೊಯ್ಸಳ ವಿಷ್ಣುವರ್ಧನನ ಸೇನಾಧಿಪತಿಯಾದ ಗಂಗರಾಜ ದಂಡನಾಯಕನು ತಲಕಾಡಿನಲ್ಲಿ ಕ್ರಿ.ಶ.೧೧೧೬ರಲ್ಲಿ ಸೋಲಿಸಿದನು.[೧] ಈ ವಿಜಯದಿಂದಾಗಿ ಚೋಳರ ವಶದಲ್ಲಿದ್ದ ಗಂಗವಾಡಿ ಪ್ರದೇಶವೆಲ್ಲವೂ ಹೊಯ್ಸಳರ ಅಧೀನಕ್ಕೆ ಸೇರಿತು. ಈ ಮೂಲಕ ಆ ಮೂಲಕ ಗಂಗವಾಡಿಯ ಪ್ರದೇಶದಲ್ಲಿ ಬಹುಮುಖ್ಯ ಆಡಳಿತ ವಿಭಾಗವಾಗಿದ್ದ ಇಂದಿನ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು ಪ್ರದೇಶವು ಹೊಯ್ಸಳ ಸಾಮ್ರಾಜ್ಯದಲ್ಲಿ ವಿಲೀನವಾಯಿತು. ಅಲ್ಲಿಂದ ಹೊಯ್ಸಳರ ಅವನತಿಯವರೆಗೂ ಈ ಪ್ರದೇಶವು ಹೊಯ್ಸಳ ಆಡಳಿತಶಾಖೆಯ ಭಾಗವಾಗಿ ಚನ್ನಪಟ್ಟಣ ಪ್ರದೇಶವು ಅಸ್ತಿತ್ವದಲ್ಲಿತ್ತು. ಹಾಗಾಗಿ ಚನ್ನಪಟ್ಟಣ ಪ್ರದೇಶದಲ್ಲಿ ಹೊಯ್ಸಳರ ಆಳ್ವಿಕೆಯನ್ನು ಸಾಕ್ಷೀಕರಿಸುವ ಹಲವಾರು ಈ ಶಾಸನಗಳು ದೊರೆತಿದ್ದು, ಈ ಲೇಖನದಲ್ಲಿ ಆ ಶಾಸನಗಳ ನೆಲೆ–ಹಿನ್ನಲೆಯನ್ನು ಹಾಗೂ ಅವುಗಳ ಮಹತ್ವವನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಆರಂಭದಲ್ಲಿ, ಹೊಯ್ಸಳ ಅರಸ ವಿಷ್ಣುವರ್ಧನನ ಕಾಲದ ಕ್ರಿ.ಶ.೧೧೧೨ರ ಚನ್ನಪಟ್ಟಣ ತಾಲ್ಲೂಕಿನ ಕೃಷ್ಣಾಪುರ ಗ್ರಾಮದ ಒಂದು ಶಾಸನ[೨] ನಮಗೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ದೊರೆತಿದ್ದು, ಈ ಶಾಸನವು ಹೊಯ್ಸಳ ಅರಸ ವಿಷ್ಣುವರ್ಧನನ್ನು 'ತಲಕಾಡುಗೊಂಡ, ಭುಜಬಲ ವೀರಗಂಗ ಪ್ರತಾಪ ಹೊಯ್ಸಳ ದೇವರು ರಾಜ್ಯಂಗೆಯ್ಯುತ್ತಿರೆ' ಎಂದು ಉಲ್ಲೇಖಿಸುತ್ತದೆ. ಜೊತೆಗೆ ಇದೇ ಶಾಸನವು ವಿಷ್ಣುವರ್ಧನನ ಆಳ್ವಿಕೆಯ ಕಾಲದಲ್ಲಿ ಬೆಟ್ಟಹಳ್ಳಿಯ (ಈಗಿನ ಕೃಷ್ಣಾಪುರ) ಅಂಕಕಾರೇಶ್ವರ ದೇವರಿಗೆ ಭೂದಾನ ಮಾಡಿದ ವಿವರವನ್ನು ಸಹ ನೀಡುತ್ತದೆ. ಹಾಗಾಗಿ ವಿಷ್ಣುವರ್ಧನನ ಆಳ್ವಿಕೆಯ ಕಾಲಕ್ಕಾಗಲೇ ಚನ್ನಪಟ್ಟಣ ಪ್ರದೇಶವು ಹೊಯ್ಸಳರ ಅಧೀನದಲ್ಲಿತ್ತು ಎಂಬುದು ತಿಳಿಯುತ್ತದೆ.

ಜೊತೆಗೆ ಚನ್ನಪಟ್ಟಣ ತಾಲ್ಲೂಕಿನ ಗಡಿ ಪ್ರದೇಶದಲ್ಲಿರುವ ಈಗಿನ ಮದ್ದೂರು ತಾಲ್ಲೂಕಿನ ಅರೆತಿಪ್ಪೂರು ಗ್ರಾಮದಲ್ಲಿ ದೊರೆತಿರುವ ವಿಷ್ಣುವರ್ಧನನ ಕಾಲದ ಕ್ರಿ.ಶ.೧೧೧೭ಶಾಸನದಲ್ಲಿ[೩] ಹೊಯ್ಸಳ ಅರಸ ವಿಷ್ಣುವರ್ಧನನ ಮಹಾಪ್ರಧಾನಿ, ಹಿರಿಯ ದಂಡನಾಯಕನಾದ ಗಂಗರಾಜನು ಚೋಳರ ಆದಿಯಮನನ್ನು ಸೋಲಿಸಿ ತಲಕಾಡನ್ನು ಗೆದ್ದಾಗ, ನವಿಲೆತೀರ್ಥಕ್ಕೆ ತಳವೃತ್ತಿಯಾಗಿ ಭೂಮಿ ಕಾಣಿಕೆಗಳನ್ನು, ತಿಪ್ಪೂರು ಗ್ರಾಮವನ್ನು ಅರಸನಿಂದ ಕೊಡುಗೆಯಾಗಿ ಪಡೆದು ಇಲ್ಲಿನ ಜೈನಮುನಿಗಳಿಗೆ ದತ್ತಿ ನೀಡಿದನೆಂದು ಉಲ್ಲೇಖವಿದೆ. ಅದೇ ರೀತಿ ಹೊಯ್ಸಳ ಅರಸ ವಿಷ್ಣುವರ್ಧನನ ನಂತರ ಅಧಿಕಾರಕ್ಕೆ ಬಂದ ಆತನ ಮಗನಾದ ಒಂದನೆಯ

---

[೧] ಗೋಪಾಲ್.ಬಿ.ಆರ್ (ಸಂ),೧೯೭೬, ಎಪಿಗ್ರಾಫಿಯಾ ಕರ್ನಾಟಿಕ,ಸಂಪುಟ.೦೫, ತಿ.ನರಸೀಪುರ,ಶಾಸನ ಸಂಖ್ಯೆ.೧೫೧, ತಲಕಾಡು, ಪುಟ.೫೫೮

[೨] ರೈಸ್.ಬಿ.ಎಲ್.,(ಸಂ),೧೯೦೫, ಎಪಿಗ್ರಾಫಿಯಾ ಕರ್ನಾಟಿಕ,ಸಂಪುಟ.೯, ಅನುಬಂಧ ಸಂಪುಟ, ಚನ್ನಪಟ್ಟಣ, ಶಾಸನ ಸಂಖ್ಯೆ.೨೨೫, ಕೃಷ್ಣಾಪುರ, ಪುಟ.೫೪

[೩] ಗೋಪಾಲ್.ಬಿ.ಆರ್ (ಸಂ), ೧೯೭೬, ಎಪಿಗ್ರಾಫಿಯಾ ಕರ್ನಾಟಿಕ,ಸಂಪುಟ.೦೫, ತಿ.ನರಸೀಪುರ, ಶಾಸನ ಸಂಖ್ಯೆ.೧೫೧, ತಲಕಾಡು, ಪುಟ.೫೫೮

ನರಸಿಂಹನ ಕಾಲದ ಅನೇಕ ಶಾಸನಗಳು ಚನ್ನಪಟ್ಟಣ ಪ್ರದೇಶದಲ್ಲಿ ದೊರೆತಿವೆ. ಈತ ಅಧಿಕಾರಕ್ಕೆ ಬಂದ ನಂತರದಲ್ಲಿ ಸ್ವತಃ ತಾನೇ ಸೈನ್ಯ ಸಮೇತ ದಂಡೆತ್ತಿ ಹೋಗಿ ಸೀಗಲನಾಡನ್ನು (ಇಂದಿನ ಕನಕಪುರ ಪ್ರದೇಶ) ವಶಪಡಿಸಿಕೊಂಡ ಬಗ್ಗೆ ಕನಕಪುರ ತಾಲ್ಲೂಕಿನ ಬಾಳೇಪುರ ಗ್ರಾಮದ ಶಾಸನವೊಂದು[೪] ಮಾಹಿತಿ ನೀಡುತ್ತದೆ. ಒಂದನೇ ನರಸಿಂಹನು ವಶಪಡಿಸಿಕೊಂಡ ಈ ಸೀಗಲನಾಡಿನಲ್ಲಿ ಚನ್ನಪಟ್ಟಣ ತಾಲ್ಲೂಕಿನ ಕೆಲಪ್ರದೇಶಗಳು ಸೇರಿದ್ದವು ಎಂಬುದು ಗಮನಾರ್ಹ ವಿಚಾರ.

ಅದೇ ರೀತಿ ಕ್ರಿ.ಶ.೧೧೫೫ರ ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರು ಗ್ರಾಮದ ಶಾಸನದಲ್ಲಿ[೫] ವೀರನರಸಿಂಹನ ಪ್ರಧಾನಿಯಾದ ಮಲ್ಲಿದೇವ ದಣ್ಣಾಯಕನು ಹೊಸಗುಂದದ ಕೋಟೆಯ ಮೇಲೆ ದಾಳಿ ಮಾಡಿದಾಗ ಕನಕನಾಯಕನೆಂಬ ವೀರನು ಹೋರಾಡಿ ಮಡಿದ ಬಗ್ಗೆ ಹಾಗೂ ಹೊಯ್ಸಳ ಅರಸ ವೀರನರಸಿಂಹನನ್ನು 'ಪ್ರತಾಪ ಚಕ್ರವರ್ತಿ' ಎಂದು ವರ್ಣಿಸಿರುವ ಬಗ್ಗೆ ಉಲ್ಲೇಖವಿದೆ. ಜೊತೆಗೆ ತಾಲ್ಲೂಕಿನ ಮಳೂರು ಗ್ರಾಮದ ಕೈಲಾಸೇಶ್ವರ ದೇವಾಲಯದ ಸಮೀಪವಿರುವ ಶಾಸನದಲ್ಲಿ[೬]ಯೂ ಸಹ ಒಂದನೇ ನರಸಿಂಹನನ್ನು 'ಮಹಾಮಂಡಳೇಶ್ವರ, ಜಗದೇಕ ಮಲ್ಲ' ಎಂದು ವರ್ಣಿಸಿದ್ದು, ಮಳೂರಿನ ಕುತ್ತಾಂದುದೇವರ ನೈವೇದ್ಯಕ್ಕೆ ಈತ ಭೂದಾನ ಮಾಡಿದ ವಿವರವಿದೆ.

ಅಲ್ಲದೆ ಕ್ರಿ.ಶ.೧೧೪೯ರ ಮಳೂರುಪಟ್ಟಣದ ಶಾಸನವೊಂದು[೭] ಒಂದನೇ ನರಸಿಂಹನು ಮಣಲೂರು ಅಥವಾ ನಿಗರಿಲಿ ಚೋಳಪುರಂನ ಅರುಮೊಳೀಶ್ವರ (ಈಗಿನ ಅರ್ಕೇಶ್ವರ) ದೇವಾಲಯದ ಪೂಜಾಕಾರ್ಯಕ್ಕೆ ದತ್ತಿ ಬಿಟ್ಟ ವಿವರವನ್ನು ನೀಡುತ್ತದೆ. ಮೂಲತಃ ತಮಿಳಿನಲ್ಲಿರುವ ಈ ಶಾಸನದಲ್ಲಿ ನರಸಿಂಹನನ್ನು 'ಶ್ರೀಮಾನ್ ಮಹಾಮಂಡಲೇಶ್ವರ ತ್ರಿಭುವನಮಲ್ಲ ತಲಕಾಡು ಕೊಂಗು ನಂಗಿ ಕೊಯಾಜೂರು ಉಚ್ಚಂಗಿ ಹಾನಗಲ್ ಹಲಸಿಗಿಯಗೊಂಡ ಭುಜಬಲ ವೀರಗಂಗ ಪೊಯ್ಸಳ ಜಗನೇಕಮಲ್ಲ ಪೊಯ್ಸಳ ಶ್ರೀನರಸಿಂಹದೇವ' ಎಂದು ವರ್ಣಿಸಲಾಗಿದೆ. ಇದರಿಂದ ಹಲಸಿಗಿ-೧೨೦೦೦ ಪ್ರದೇಶವನ್ನು ಒಂದನೇ ನರಸಿಂಹನು ಗೆದ್ದು ಅದನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡಿದ್ದ ಬಗ್ಗೆ ತಿಳಿಯುತ್ತದೆ. ಇದಲ್ಲದೆ ಕ್ರಿ.ಶ.೧೧೬೩ರ ಮಳೂರಿನ ಶಾಸನ[೮] 'ನರಸಿಂಹ ಹೊಯ್ಸಳದೇವ'ನ ಆಳ್ವಿಕೆಯ ಕಾಲದಲ್ಲಿ ಮಹದೇವ ಎಂಬುವನು ಮಳೂರಿನ ಕೈಲಾಸೇಶ್ವರ ದೇವರ ನಂದಾದೀಪಕ್ಕಾಗಿ ಭೂಮಿಯನ್ನು ದಾನವಾಗಿ ಕೊಟ್ಟಿದ್ದನ್ನು ದಾಖ ಒಂದನೇ ನರಸಿಂಹನಿಗೆ 'ಗಂಗವಾಡಿ, ನೊಳಂಬಾವಡಿ, ವನವಾಸಿ-೧೨೦೦೦, ವೆಳಿಕ್ಕಿರಾಮನ್ ಗೊಂಡ' ಎಂಬ ಬಿರುಗಳಿಂದ ವರ್ಣಿಸಲಾಗಿದೆ.

ಒಂದನೇ ನರಸಿಂಹನನ್ನು ಪದಚ್ಯುತಗೊಳಿಸಿ ಕ್ರಿ.ಶ.೧೧೭೩ರಲ್ಲಿ ಆತನ ಮಗನಾದ ಎರಡನೇ ವೀರಬಲ್ಲಾಳನು ಹೊಯ್ಸಳ ರಾಜ್ಯದ ಅರಸನಾದನು. ಕ್ರಿ.ಶ.೧೧೮೩ರ ಚನ್ನಪಟ್ಟಣ ತಾಲ್ಲೂಕಿನ ಹೊನ್ನನಾಯಕನಹಳ್ಳಿಯ ತಮಿಳಿನಲ್ಲಿರುವ ಶಾಸನವೊಂದು[೯] ವೀರಬಲ್ಲಾಳನ ಸೇನಾಧಿಪತಿಯಾದ ನಂಬಿಯಾಂಡನ್ ಎಂಬುವನಿಗೆ ಮಂಗಳೇಶ್ವರ ಅಥವಾ ಬಲ್ಲಾಳೀಶ್ವರಂ ದೇವರ ಸಮ್ಮುಖದಲ್ಲಿ ಅರಕ್ಕಿರೈ (ಈಗಿನ ಹೊನ್ನಾಯಕನ ಹಳ್ಳಿ?) ಗ್ರಾಮದ ತೆರಿಗೆಯನ್ನು ದಾನವಾಗಿ ಕೊಟ್ಟ ವಿವರ ಹಾಗೂ ಇಮ್ಮಡಿ ವೀರಬಲ್ಲಾಳನು 'ಮಹಾಮಂಡಲೇಶ್ವರ ತ್ರಿಭುವನಮಲ್ಲ ತಲಕಾಡು ಗಂಗವಾಡಿ ನೊಳಂಬವಾಡಿ ಕೊಂಗು ನಂಗಿಲಿ ಕೊಯಾಜೂರು ಉಚ್ಚಂಗಿ ಬನವಾಸಿ ಹಾನುಗಲ್ ಹಲಸಿಗಿ ಹನ್ನೆರಡು ಸಾವಿರದಗೊಂಡ, ಅಸಹಾಯಶೂರ ಶನಿವಾರಸಿದ್ಧಿ ಗಿರಿದುರ್ಗಮಲ್ಲ ಛಲದಂಕರಾಮ' ಎಮದು ವರ್ಣಿಸಿರುವುದರ ಬಗ್ಗೆ ತಿಳಿಯ ಬಹುದು. ಇದೇ ತಾಲ್ಲೂಕಿನ ಹೆಚ್.ಬ್ಯಾಡರಹಳ್ಳಿಯ ತಮಿಳಿನ ಶಾಸನವೊಂದು[೧೦] ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಕಿಳಲಾದಿರಾಯ ಪಮ್ಮಿದೇವ ಎಂಬುವನು ಮರುದೂರು (ಈಗಿನ ಮದ್ದೂರು) ಅಥವಾ ಶ್ರೀ ನರಸಿಂಹ ಚತುರ್ವೇದಿ ಮಂಗಲಂನ ಸಿಂಗಪೆರುಮಾಳ್ (ನರಸಿಂಹ) ದೇವರಿಗೆ ದಾನ ನೀಡಿದ್ದನ್ನು ದಾಖಲಿಸಿದ್ದು, ವೀರಬಲ್ಲಾಳನನ್ನು ಮೇಲೆ ಉಲ್ಲೇಖಿಸಿದ ಬಿರುದುಗಳಲ್ಲದೇ, 'ನಿಸ್ಸಂಕಪ್ರತಾಪ ಪೊಯ್ಸಳ ಶ್ರೀವಿಷ್ಣುವರ್ಧನ ವೀರಬಲ್ಲಾಳದೇವ' ಎಂದು ಈ ಶಾಸನದಲ್ಲಿ ವರ್ಣಿಸಲಾಗಿದೆ.

ಕ್ರಿ.ಶ. ೧೧೮೯ರ ಇಗ್ಗಲೂರು ಗ್ರಾಮದ ಶಾಸನವೊಂದು[೧೧] ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಮಂಚಗಾವುಂಡ ಹಾಗೂ ಕಲ್ಲುವೊಚ ಎಂಬ ವೀರರು ತುರುಗಾಳಗವೊಂದರಲ್ಲಿ ಮಡಿದುದ್ದನ್ನು ಹಾಗೂ ವೀರಬಲ್ಲಾಳನನ್ನು 'ವೀರಗಂಗ ವಿಷ್ಣುವರ್ಧನ ಶ್ರೀನಾರಸಿಂಗ ಹೊಯ್ಸಳ ವೀರಬಲ್ಲಾಳದೇವ' ಎಂದು ವರ್ಣಿಸಿರುವುದನ್ನು ಕಾಣುತ್ತೇವೆ. ಇದೇ ಅಲ್ಲದೆ ಕ್ರಿ.ಶ.೧೧೯೨ರ ಕೂಡ್ಲೂರು ಗ್ರಾಮದ ಶಾಸನದಲ್ಲಿ[೧೨] ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಮಂಗಳೇಶ್ವರ ದೇವರ ನಂದಾದೀಪಕ್ಕಾಗಿ ದತ್ತಿ ನೀಡಿದ ವಿವರವಿದೆ. ಜೊತೆಗೆ ಕ್ರಿ.ಶ.೧೧೯೬ರ ಚನ್ನಪಟ್ಟಣ ತಾಲ್ಲೂಕಿನ ಬೇವೂರು ಗ್ರಾಮದ ಶಾಸನವೊಂದು[೧೩] ವೀರಬಲ್ಲಾಳನಿಗಾಗಿ ಆತ್ಮಾರ್ಪಣೆ ಮಾಡಿಕೊಂಡು ಮಡಿದ ವಿವರವನ್ನು ತಿಳಿಸುವ ಮಹತ್ವಪೂರ್ಣವಾದ ಶಾಸನವಾಗಿದೆ. ಮಾರೈಯನ್ ಎಂಬುವನು ವೀರಬಲ್ಲಾಳನಿಗೆ ಶುಭವಾಗಲಿ ಎಂದು ಹಾರೈಸಿ, ಹರಕೆ ಹೊತ್ತುಕೊಂಡು ಆತ್ಮಾಹುತಿ ಮಾಡಿಕೊಂಡಿದ್ದಾನೆ ಎಂಬ ವಿವರಣೆ ನೀಡುತ್ತದೆ.

ಹೊಯ್ಸಳ ಅರಸ ಮೂರನೆಯ ನರಸಿಂಹನು ದ್ವಾರಸಮುದ್ರದಿಂದ ಆಳ್ವಿಕೆ ನಡೆಸುತ್ತಿದ್ದಾಗ ಆತನ ದಂಡನಾಯಕನಾದ ಹಿರಿಯ ಕಲೆಯದಣ್ಣಾಯಕನು ತನ್ನ ರಾಜಧಾನಿಯಾದ ಚಿಕ್ಕಗಂಗವಾಡಿಯ ಹೊಂಗನೂರು ನೆಲೆವೀಡಿನಿಂದ ಈ ಪ್ರದೇಶವನ್ನು ಆಳ್ವಿಕೆ ನಡೆಸುತ್ತಿದ್ದುದಾಗಿ ಕನಕಪುರ ತಾಲ್ಲೂಕಿನ ನಿಟ್ಟೂರು ಗ್ರಾಮದ ಶಾಸನವು ದಾಖಲಿಸುತ್ತದೆ.[೧೪] ಇದರಿಂದ ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರು ಹೊಯ್ಸಳರ ಉಪರಾಜಧಾನಿಯಾಗಿತ್ತು ಎಂಬುದು

---

೪ ರೈಸ್.ಬಿ.ಎಲ್.,(ಸಂ),೧೯೦೫,ಎಪಿಗ್ರಾಫಿಯಾ ಕರ್ನಾಟಿಕ,ಸಂಪುಟ.೯, ಕನಕಪುರ,ಶಾಸನ ಸಂಖ್ಯೆ.೨೩, ಬಾಳೇಪುರ, ಪುಟ.೨೬೪

೫ ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೪೬,ಹೊಂಗನೂರು,ಪುಟ.೩೧೩

೬ ಮೈಸೂರ್ ಆರ್ಕಿಯಲಾಜಿಕಲ್ ರಿಪೋರ್ಟ್(ಎಂ.ಎ.ಆರ್)-೧೯೪೨, ಶಾಸನ ಸಂಖ್ಯೆ-೯, ಪುಟ.೧೧೭

೭ ರೈಸ್.ಬಿ.ಎಲ್.,(ಸಂ),೧೯೦೫,ಎಪಿಗ್ರಾಫಿಯಾ ಕರ್ನಾಟಿಕ,ಸಂಪುಟ.೯, ಚನ್ನಪಟ್ಟಣ,ಶಾಸನ ಸಂಖ್ಯೆ.೧೩೭,ಮಳೂರುಪಟ್ಟಣ,ಪುಟ.೧೬೨

೮ ರೈಸ್.ಬಿ.ಎಲ್., (ಸಂ), ೧೯೦೫,ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ.೯,ಚನ್ನಪಟ್ಟಣ,ಶಾಸನ ಸಂಖ್ಯೆ.೭೮, ಮಳೂರು, ಪುಟ.೧೪೮

೯ ಅದೇ, ಚನ್ನಪಟ್ಟಣ,ಶಾಸನ ಸಂಖ್ಯೆ.೧೬೦,ಹೊನ್ನಾಯಕನಹಳ್ಳಿ, ಪುಟ.೧೬೬

೧೦ ಅದೇ, ಚನ್ನಪಟ್ಟಣ,ಶಾಸನ ಸಂಖ್ಯೆ.೧೬೭,ಬ್ಯಾಡರಹಳ್ಳಿ, ಪುಟ.೧೬೭

೧೧ ಅದೇ,ಚನ್ನಪಟ್ಟಣ, ಶಾಸನ ಸಂಖ್ಯೆ.೬೪, ಇಗ್ಗಲೂರು,ಪುಟ.೩೨೦

೧೨ ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೧೨೪, ಕೂಡ್ಲೂರು,ಪುಟ.೧೫೮

೧೩ ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೭೨, ಬೇವೂರು,ಪುಟ.೧೪೬

೧೪ ರೈಸ್.ಬಿ.ಎಲ್.,(ಸಂ), ೧೯೦೫, ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ.೯, ಕನಕಪುರ, ಶಾಸನ ಸಂಖ್ಯೆ.೮೦, ನಿಟ್ಟೂರು,ಪುಟ.೨೮೩

ಸ್ಪಷ್ಟ. ಚನ್ನಪಟ್ಟಣ ತಾಲ್ಲೂಕಿನ ಗರಕಹಳ್ಳಿ ಗ್ರಾಮದ ಕ್ರಿ.ಶ.೧೨೮೬ರ ವೀರಗಲ್ಲಿನಲ್ಲಿ[೧೫] ವೀರನರಸಿಂಹನ ಕಾಲದಲ್ಲಿ ಈ ಪ್ರದೇಶಕ್ಕೆ ತುಂಗಣಿ ನಾಡು ಎಂಬ ಹೆಸರಿತೆಂಬುದನ್ನು ಹಾಗೂ ಈ ತುಂಗಣಿ ನಾಡನ್ನು ಆಳುವ ಗೌಡನ ಮಗ ಭೀಮಗೌಡನು ಹುಯಲಲ್ಲಿ (ಯುದ್ಧದಲ್ಲಿ) ಬಿದ್ದು ಸ್ವರ್ಗಸ್ತನಾದನೆಂದು ತಿಳಿಸುತ್ತದೆ.

ಮೂರನೇ ನರಸಿಂಹನು ನೀಡಿದ ದಾನ ದತ್ತಿಗಳ ವಿವರಗಳನ್ನು ಕ್ರಿ.ಶ.೧೨೮೮ರ ಚನ್ನಪಟ್ಟಣ ತಾಲ್ಲೂಕಿನ ಯಲಿಯೂರು ಗ್ರಾಮದ ಶಿಲಾಶಾಸನ[೧೬] ಕನಕಪುರ ತಾಲ್ಲೂಕಿನ ಹಲ್ಲೂರು ಗ್ರಾಮದ ಶಾಸನ[೧೭] ಕ್ರಿ.ಶ.೧೨೯೬ರ ಹೊಂಗನೂರಿನ ಶಾಸನಗಳಲ್ಲಿ[೧೮]ಕಾಣಬಹುದು. ಈ ಶಾಸನದಿಂದ ಮೂರನೇ ನರಸಿಂಹನು ಕ್ರಿ.ಶ. ೧೨೯೨ರಲ್ಲಿ ತನ್ನ ಮಗನಾದ ಮೂರನೇ ಬಲ್ಲಾಳನಿಗೆ ಸಾಮ್ರಾಜ್ಯವನ್ನು ವಹಿಸಿದ ನಂತರ ಅಂದರೆ ಕ್ರಿ.ಶ.೧೨೯೬ರಲ್ಲಿ ಚನ್ನಪಟ್ಟಣ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದುದು ತಿಳಿಯುತ್ತದೆ.

ಮೂರನೆಯ ನರಸಿಂಹನ ನಂತರ ಆತನ ಮಗನಾದ ಮೂರನೆಯ ಬಲ್ಲಾಳನು ಕ್ರಿ.ಶ.೧೨೯೨ರಲ್ಲಿ ಅರಸನಾದನು. ಈತ ಹೊಯ್ಸಳರಲ್ಲಿ ಕೊನೆಯ ಮುಖ್ಯನಾದ ಅರಸನಾಗಿದ್ದಾನೆ. ಈತನ ಕಾಲದ ಇಪ್ಪತ್ತಕ್ಕೂ ಹೆಚ್ಚಿನ ಶಾಸನಗಳು ಚನ್ನಪಟ್ಟಣ ತಾಲ್ಲೂಕಿನಲ್ಲಿ ದೊರೆಯುತ್ತವೆ. ಮೂರನೇ ಬಲ್ಲಾಳನು ಆಳ್ವಿಕೆ ಬಂದ ನಂತರ ತನ್ನ ಚಿಕ್ಕಪ್ಪನಾದ ರಾಮನಾಥನೊಡನೆ ಯುದ್ಧ ಮಾಡಬೇಕಾಯಿತು. ತಮಿಳುನಾಡು ಪ್ರದೇಶಗಳನ್ನು ಆಳ್ವಿಕೆ ನಡೆಸುತ್ತಿದ್ದ ರಾಮನಾಥನು ಕ್ರಿ.ಶ.೧೨೯೪ರಲ್ಲಿ ಮೂರನೇ ಬಲ್ಲಾಳನೊಡನೆ ಯುದ್ಧ ಮಾಡಿದ್ದನ್ನು ಚನ್ನಪಟ್ಟಣ ತಾಲ್ಲೂಕಿನ ಮಾಕಳಿ ಗ್ರಾಮದ ಪಕ್ಕದ ಗ್ರಾಮವಾದ ದೊಡ್ಡಗಂಗವಾಡಿಯ (ರಾಮನಗರ ತಾಲ್ಲೂಕಿನ ಗ್ರಾಮ) ಶಾಸನವು ದಾಖಲಿಸಿದೆ.[೧೯] ಈ ಶಾಸನವು ರಾಮನಾಥನ ಸೈನ್ಯ ಹಿರಿಯಗಂಗವಾಡಿ ಊರಿನ (ಈಗಿನ ದೊಡ್ಡಗಂಗವಾಡಿ ಗ್ರಾಮ) ಮೇಲೆ ದಾಳಿ ಮಾಡಿದಾಗ ಕೇತಣ್ಣ ಎಂಬುವನು ಅವರೊಂದಿಗೆ ಹೋರಾಡಿ ಮಡಿದುದನ್ನು ಸ್ಮರಿಸುತ್ತದೆ. ಜೊತೆಗೆ ಮೂರನೇ ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ನಿಡಲಾದ ದಾನದತ್ತಿಗಳ ವಿವರಗಳನ್ನು ಕ್ರಿ.ಶ.೧೩೦೬ರ ಮಳೂರು ಗ್ರಾಮದ ಶಾಸನ[೨೦], ನೆರಳೂರು ಗ್ರಾಮದ ಶಿಲಾಶಾಸನ[೨೧]ಗಳಲ್ಲಿ ಕಾಣಬಹುದು. ಇದರ ಜೊತೆಗೆ ಹರೂರು ಗ್ರಾಮದ ಶಾಸನದಲ್ಲಿ[೨೨] ಕಾಮಯ್ಯ ಹಾಗೂ ಸೂರಪ್ಪ ಎಂಬ ಮೂರನೇ ವೀರಬಲ್ಲಾಳನ ಅಧಿಕಾರಿಗಳು ಮಳಲೂರ ಹಟ್ಟಿಯ ತೆರಿಗೆಗಳನ್ನು ವರ್ತಕರಿಗೆ ದಾನಕೊಟ್ಟ ವಿವರ ದಾಖಲಾಗಿದೆ.ಈ ಶಾಸನವು ಮೂರನೇ ಬಲ್ಲಾಳನನ್ನು 'ಪಾಂಡ್ಯರಾಯ ಪ್ರತಿಷ್ಠಾಚಾರ್ಯ' ಎಂದು ವರ್ಣಿಸಿದೆ.

ಕ್ರಿ.ಶ.೧೩೧೮ರ ಮಾಗೇನಹಳ್ಳಿಯ ಶಾಸನವು[೨೩] ಮೂರನೇ ಬಲ್ಲಾಳನು ಅರುಣಸಮುದ್ರದಿಂದ ಆಳ್ವಿಕೆ ನಡೆಸುತ್ತಿದ್ದ ಎನ್ನುತ್ತಾ, ಮೂರನೇ ಬಲ್ಲಾಳನನ್ನು 'ಚಾಳುಕ್ಯ ಚಕ್ರವರ್ತಿ, ವೀರಮಾಹೇಶ್ವರ, ಬಿರುದಹಭಲ್ಯ, ಸಕಳವಿದ್ಯಾಧರ, ಧನಂಜಯಮೇದಿನಿಯ, ಕ್ರೋಢಶಾರ್ದೂಲ ರೂಡಿರಾಯ ವಡಬಾನಳ, ಚಾಳಾಕ್ಷವೀರ್ಯ್ಯ, ಹುಲಿರಾಯ, ಗಜಾಂಕುಶ, ನಿಸ್ಸಂಕಮಲ್ಲ' ಎಂಬ ಬಿರುದುಗಳಿಂದ ವರ್ಣಿಸಲಾಗಿದೆ. ಈ ಶಾಸನದನ್ವಯ ಹೊಯ್ಸಳ ಚಕ್ರವರ್ತಿಗಳಿಗಿರುವ 'ಮಹಾಮಂಡಳೇಶ್ವರ' ಎಂಬ ಬಿರುದು ಅರಮನೆಯ ಪ್ರಧಾನಿಯಾಗಿದ್ದ ಸೋಮರಸ ಎಂಬುವನಿಗೂ ಇತ್ತೆಂಬುದು ತಿಳಿಯುತ್ತದೆ. ಜೊತೆಗೆ ಮಾಳಗಾಳು ಗ್ರಾಮದ ಕ್ರಿ.ಶ.೧೩೨೪ರ ಶಿಲಾಶಾಸನದಂತೆ[೨೪] ವೀರಬಲ್ಲಾಳನಿಗೆ 'ಮಸ್ತಕಶೂಲ ಕಾಡವರಾಯ ಕಂದಕುಂದಾಳ ಜಗದಗೋಪಾಳಪಟ್ಟ ಚಾಣಕ್ಯನಾರಾಯಣ ಅಭಂಗರಾವುತರಾಯ ಮಿಗೆವರಗಂಡ ಕಾಯಕೋಟಾಂಬರಾದೇವೀಲಬ್ಧ' ಮೊದಲಾದ ಬಿರುದುಗಳಿದ್ದವು.

ಇನ್ನು ಚನ್ನಪಟ್ಟಣ ಪ್ರದೇಶದಲ್ಲಿ ಹೊಯ್ಸಳ ಅರಸರ ಶಾಸನಗಳಲ್ಲದೆ ಹೊಯ್ಸಳರ ಆಡಳಿತದಲ್ಲಿ ವಿವಿಧ ಹಂತಗಳಲ್ಲಿ ಆಡಳಿತ ನಡೆಸುತ್ತಿದ್ದ ಮಾಂಡಳಿಕರು, ಅಧಿಕಾರಿಗಳ, ಸಾಮಂತರ, ದಂಡನಾಯಕರಿಗೆ ಸಂಬಂಧಿಸಿದ ಶಾಸನಗಳು ಲಭ್ಯವಾಗಿದ್ದು ಇದರಿಂದ ಚನ್ನಪಟ್ಟಣ ಪ್ರದೇಶ ಹೊಯ್ಸಳರ ಕಾಲದ ಪ್ರಮುಖ ಆಡಳಿತವಿಭಾಗವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಇದಕ್ಕೆ ಉದಾಹರಣೆ ಎಂಬಂತೆ, ಕೃಷ್ಣಾಪುರ ಗ್ರಾಮದ ಕ್ರಿ.ಶ.೧೧೭೨ರ ಶಾಸನದಲ್ಲಿ[೨೫] ಇಮ್ಮಡಿ ಬಲ್ಲಾಳನ ಅಧಿಕಾರಿಯಾದ ಬೊಮ್ಮಯ್ಯ ಹೆಗ್ಗಡೆಯ ಉಲ್ಲೇಖವಿದ್ದರೆ,ಕ್ರಿ.ಶ.೧೧೮೦ರ ಮಂಗಾಪಟ್ಟಣದ ಶಾಸನದಲ್ಲಿ[೨೬] ಕಂದಮಂಗಲಂನ ಕಂದಯನಾಯಕನೆಂಬ ಇಮ್ಮಡಿ ಬಲ್ಲಾಳನ ಅಧಿಕಾರಿಯು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದ ವಿವರವಿದೆ.

ಪ್ರಾಚೀನ ಕಾಲದಲ್ಲಿ ಚನ್ನಪಟ್ಟಣ, ಮದ್ದೂರು, ಮಳವಳ್ಳಿ, ಮಂಡ್ಯ, ರಾಮನಗರ ಮುಂತಾದ ತಾಲ್ಲೂಕು ಪ್ರದೇಶಗಳನ್ನು ಕೆಳಲೆನಾಡು ಎಂದು ಕರೆಯಲಾಗುತ್ತಿದ್ದು, ಈ ಕೆಳಲೆನಾಡು ತಮಿಳು ರೂಪಾಂತರದಲ್ಲಿ ಕಿಳಲೈನಾಡು ಎಂದು ಚೋಳ–ಹೊಯ್ಸಳರ ಕಾಲದಲ್ಲಿ ಪ್ರಚಲಿತವಾಗಿತ್ತು. ಕ್ರಿ.ಶ.೧೧೮೧ರ ಹೆಚ್.ಬ್ಯಾಡರಹಳ್ಳಿಯ ಶಾಸನದಲ್ಲಿ[೨೭] ಪಮ್ಮಿದೇವ ಎಂಬುವನನ್ನು 'ಕಿಳಲಾದಿರಾಯ' ಎಂಬ ಬಿರುದಿನಿಂದ ಸೂಚಿಸುವುದನ್ನು ಕಾಣಬಹುದು. ಈತನು ಇಮ್ಮಡಿ ಬಲ್ಲಾಳನ ಕಾಲದಲ್ಲಿ ಇದ್ದನು. ಇದರಿಂದ ಪಮ್ಮಿದೇವನು ಕೆಳಲೆನಾಡಿಗೆ ಅಧಿಪತಿಯಾಗಿದ್ದ ಬಗ್ಗೆ ಹಾಗೂ ಈತ ಶ್ರೀನರಸಿಂಹ ಚತುರ್ವೇದಿ ಮಂಗಲವಾದ ಮರುದೂರಿನ (ಈಗಿನ ಮದ್ದೂರು) ಸಿಂಗಪ್ಪೆರುಮಾಳ್

---

೧೫ ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೫೭,ಗರಕಹಳ್ಳಿ, ಪುಟ.೩೧೯

೧೬ ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೬೬, ಯಲಿಯೂರು, ಪುಟ.೩೨೧

೧೭ ಅದೇ, ಕನಕಪುರ, ಶಾಸನ ಸಂಖ್ಯೆ.೭೨, ಹಲ್ಲೂರು, ಪುಟ.೨೭೯

೧೮ ಅದೇ, ಅನುಬಂಧ ಸಂಪುಟ, ಚನ್ನಪಟ್ಟಣ–೧೯೦, ಹೊಂಗನೂರು, ಪುಟ.೪೫

೧೯ ಅದೇ, ಚನ್ನಪಟ್ಟಣ–೧೮೩, ದೊಡ್ಡಗಂಗವಾಡಿ, ಪುಟ.೩೫೦

೨೦ ರೈಸ್.ಬಿ.ಎಲ್.,(ಸಂ), ೧೯೦೫,ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ.೯, ಚನ್ನಪಟ್ಟಣ, ಶಾಸನ ಸಂಖ್ಯೆ–೭೬, ಮಳೂರು, ಪುಟ.೩೨೬

೨೧ ನಾಗರಾಜ್.ಎಂ.ಜಿ., ಪಿ.ವಿ.ಕೃಷ್ಣಮೂರ್ತಿ (ಸಂ)., ಇತಿಹಾಸ ದರ್ಶನ, ಸಂಪುಟ–೨೬, ಶಾಸನ ಸಂಖ್ಯೆ–೨, ಪುಟ.೧೮೭

೨೨ ರೈಸ್.ಬಿ.ಎಲ್.,(ಸಂ), ೧೯೦೫, ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ.೯, ಚನ್ನಪಟ್ಟಣ, ಶಾಸನ ಸಂಖ್ಯೆ.೩೬, ಹರೂರು, ಪುಟ.೩೧೦

೨೩ ಅದೇ, ಚನ್ನಪಟ್ಟಣ,ಶಾಸನ ಸಂಖ್ಯೆ–೭೩, ಮಾಗೇನಹಳ್ಳಿ, ಪುಟ.೩೨೪

೨೪ ಅದೇ, ಚನ್ನಪಟ್ಟಣ,ಶಾಸನ ಸಂಖ್ಯೆ.೫೧, ಮಾಳಗಾಳು, ಪುಟ.೩೧೫

೨೫ ಅದೇ, ಅನುಬಂಧ ಸಂಪುಟ, ಚನ್ನಪಟ್ಟಣ,ಶಾಸನ ಸಂಖ್ಯೆ.೨೨೫, ಕೃಷ್ಣಾಪುರ, ಪುಟ.೫೪

೨೬ ಅದೇ, ಚನ್ನಪಟ್ಟಣ,ಶಾಸನ ಸಂಖ್ಯೆ–೧೭೨, ಮಂಗಾಪಟ್ಟಣ, ಪುಟ.೧೬೮

೨೭ ಅದೇ, ಚನ್ನಪಟ್ಟಣ,ಶಾಸನ ಸಂಖ್ಯೆ.೧೬೭,ಹೆಚ್.ಬ್ಯಾಡರಹಳ್ಳಿ, ಪುಟ.೧೬೭

(ನರಸಿಂಹ) ದೇವರಿಗೆ ಬೆಪ್ಪೂರು ಅಲಿಯಾಸ್ ವೆಂಗೆಶ್ವರಕುಲಕಾಲನಲ್ಲೂರಿಗೆ ಸೇರುವ ಉಪಗ್ರಾಮಗಳಾದ ತಿರುಮಡ್ಯೆಪಳ್ಳಿಪುರಂ ಹಾಗೂ ತೆಗಟ್ಟಂಗಿರಿಗಳನ್ನು ದಾನಕೊಟ್ಟ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಬೆಪ್ಪೂರಿನಲ್ಲಿ (ಬೆಂಪೂರು ಅಂದರೆ ಈಗಿನ ಬೇವೂರು) ಕಿಳಲಾದಿರಾಯ ಪಮ್ಮಿದೇವನ ಕೋಟೆಯಿತ್ತು ಎಂದು ತಿಳಿಯುತ್ತದೆ. ಹಾಗಾಗಿ ಕ್ರಿ.ಶ.೧೩೨೬ರ ಮಳೂರು ಗ್ರಾಮದ ಶಾಸನವು[೨೮] ವೀರಬಲ್ಲಾಳನ ಮಹಾಪ್ರಧಾನನಾದ ಸೂರ್ಯೆಯದಂಣ್ಣಾಯಕನ ಮಗ ಸಿಂಗೆಯದಂಣ್ಣಾಯಕನ ಅಧಿಕಾರಿಯಾದ ಪೆರ್ಮ್ಮಡಿ ಎಂಬುವವನು ವೀರಬಲ್ಲಾಳನ ತಂದೆಯ ಹೆಸರಿನಲ್ಲಿ 'ನರಸಿಂಹಪಟ್ಟಣ' ಎಂಬ ಪಟ್ಟಣವನ್ನು ನಿರ್ಮಿಸಿದ ವಿವರವನ್ನು ತಿಳಿಸುತ್ತದೆ.

ಅದೇ ರೀತಿ ಕ್ರಿ.ಶ.೧೨೭೮ರ ಯಲಿಯೂರು ಗ್ರಾಮದ ಶಿಲಾಶಾಸನ[೨೯] ಮೂರನೇ ನರಸಿಂಹನ ಮಹಾಪ್ರಧಾನನಾದ ಚಿಕ್ಕಕೇತೆಯದಣ್ಣಾಯಕನನ್ನು ಉಲ್ಲೇಖಿಸಿದರೆ, ಕ್ರಿ.ಶ.೧೧೮೩ರ ಹೊನ್ನಾಯಕನಹಳ್ಳಿಯ ತಮಿಳು ಶಾಸನ[೩೦] ಕಿಳಲಾದಿರಾಯ ವಾಚ್ಚಿದೇವನನ್ನು, ಕೂಡ್ಲೂರು ಗ್ರಾಮದ ಮಂಗಳೇಶ್ವರ ದೇವಾಲಯದಲ್ಲಿನ ಶಾಸನ [೩೧] ಇಮ್ಮಡಿ ವೀರಬಲ್ಲಾಳನ ಸೇನಾಪತಿಯ ಮಗನಾದ ವಯಿರಾ, ಕ್ರಿ.ಶ.೧೨೮೮ರ ಹೊಯ್ಸಳ ಮೂರನೇ ನರಸಿಂಹನ ಕಾಲದ ಶಾಸನ[೩೨] ಪಲವೂರ ಚಂಚಮಗೌಡ ಎಂಬ ಅಧಿಕಾರಿಯನ್ನು, ಹರೂರು ಗ್ರಾಮದ ಮೂರನೇ ವೀರಬಲ್ಲಾಳನ ಕಾಲದ ಶಾಸನ[೩೩] ಕಾಮಯ್ಯ ಮತ್ತು ಸೂರಪ್ಪ ಎಂಬ ವೀರಬಲ್ಲಾಳನ ಅಧಿಕಾರಿಗಳು ಮಹಾವಡ್ಡಬ್ಯವಹಾರಿ(ಮುಖ್ಯ ವರ್ತಕರು)ಗಳಿಗೆ ಮಳಲೂರಹಟ್ಟಿಯ ತೆರಿಗೆಗಳನ್ನು ದಾನಬಿಟ್ಟ ಬಗ್ಗೆ ಹಾಗೂ ಕ್ರಿ.ಶ.೧೩೦೭ರ ಮುಮ್ಮಡಿ ವೀರಬಲ್ಲಾಳನ ಕಾಲದ ಮಳೂರು ಗ್ರಾಮದ ಶಾಸನವು[೩೪] ಮಹಾಪ್ರಧಾನನಾದ ಜಾತ್ರೆಯದಣ್ಣಾಯಕನ ಉಲ್ಲೇಖಿಸುತ್ತವೆ. ಅಲ್ಲದೆ ಕ್ರಿ.ಶ.೧೯೧೧ರ ಕನ್ನಮಂಗಲ ಗ್ರಾಮದ ಶಾಸನ[೩೫] ಮಹದೇವರಸ ಎಂಬ ದೊರೆಯು ಆಳ್ವಿಕೆ ನಡೆಸುತ್ತಿದ್ದ ಎಂಬುದನ್ನು ದಾಖಲಿಸಿದೆ. ಶಾಸನೋಕ್ತ ಮಹದೇವರಸನು ಹೊಯ್ಸಳ ಸಾಮ್ರಾಜ್ಯದಲ್ಲಿ ಸಾಮಂತನಾಗಿ ಈ ಪ್ರದೇಶವನ್ನು ಆಳುತ್ತಿದ್ದ ಮಾಂಡಲೀಕನಾಗಿದ್ದಾನೆ. ಆದರೆ ಈ ಶಾಸನದಲ್ಲಿ 'ಶ್ರೀಮನುಮತು ಮಹದೇವರಸರು ಪ್ರಿಥ್ವೀರಾಜ್ಯಂಗೆಯುತ್ತಮಿರ್ದ್ದಲ್ಲ' ಎಂಬ ಉಲ್ಲೇಖವಿರುವುದು ವಿಶೇಷ. ಅದೇ ರೀತಿ ಹೊಯ್ಸಳರ ಕಾಲದಲ್ಲಿ ಲೆಂಕವಾಳಿ ಅಥವಾ ಗರುಡ ಪದ್ಧತಿಯು ಅಸ್ತಿತ್ವದಲ್ಲಿತ್ತು ಎಂಬುದರ ಬಗ್ಗೆ ಕ್ರಿ.ಶ.೧೧೯೬ರ ಬೇವೂರು ಗ್ರಾಮದ ಶಾಸನ[೩೬] ಮಾಹಿತಿ ನೀಡುತ್ತದೆ. ಈ ಶಾಸನದ ಅನುಸಾರ ಮಾರ್ಯೆಯನ್ ಎಂಬುವನು ಇಮ್ಮಡಿ ವೀರಬಲ್ಲಾಳನ ಶ್ರೇಯಸ್ಸಿಗಾಗಿ ಮುಂಗಾಣಿಕ್ಯೆಯಾಗಿ ಆತ್ಮಾರ್ಪಣೆ ಮಾಡಿದ ವಿಷಯವನ್ನು ತಿಳಿಸುತ್ತದೆ.

ಅದೇ ರೀತಿ ಕ್ರಿ.ಶ.೧೨೭೦ರ ಸುಳ್ಳೇರಿ ಗ್ರಾಮದ ಶಿಲಾಶಾಸನದಲ್ಲಿ[೩೭] ಹೊಯ್ಸಳ ದೊರೆ ಮೂರನೇ ನರಸಿಂಹನು ಈ ಪ್ರದೇಶದ ಹಳ್ಳಿಗಳ ತೆರಿಗೆಗಳನ್ನು ವಸೂಲಿ ಮಾಡುವ ಸಲುವಾಗಿ ಚಿಕ್ಕಗಂಗವಾಡಿ ನಾಡ ಅಧಿಕಾರಿಗಳು ಹೋಗದಂತಾದಾಗ ಆ ಅಧಿಕಾರವನ್ನು ಚಿಕ್ಕಸೋಮನಾಥಪುರದ ಮಹಾಜನರಿಗೆ ವಹಿಸಿದ ವಿವರ ತಿಳಿಯುತ್ತದೆ. ಇನ್ನು ರಾಮನಗರ ತಾಲ್ಲೂಕಿನ ಚನ್ನಮಾನಹಳ್ಳಿಯ ಶಾಸನವೊಂದು[೩೮] ಮಹಾಪ್ರಧಾನ ಚಿಕ್ಕಕೇತಯ್ಯದಣ್ಣಾಯಕನಿಗೆ ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರು ರಾಜಧಾನಿಯಾಗಿತ್ತು ಎಂದು ದಾಖಲಿಸಿದೆ. ಚಿಕ್ಕಕೇತಯ್ಯದಣ್ಣಾಯಕನಿಂದ ಚೆನ್ನಮಾಡಿಹಳ್ಳಿಯ (ಈಗಿನ ಚನ್ನಮಾನಹಳ್ಳಿ) ಚಲುವಯ್ಯ ಎಂಬುವನು ಪೆಟ್ಟುತಿಂದು ಸಾವನ್ನಪ್ಪಿದ ವಿವರ ಈ ಶಾಸನದಲ್ಲಿದೆ. ಬಹುಶಃ ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿದ್ದ ಹೊಂಗನೂರು ಮತ್ತು ಚೆನ್ನಮಾಡಿಹಳ್ಳಿಯ ಈ ಇಬ್ಬರಿಗೂ ಯಾವುದೋ ಕಾರಣದಿಂದ ಕಲಹ ಉಂಟಾಗಿರಬೇಕು ಎನಿಸುತ್ತದೆ. ಹಾಗೇಯೇ ಗರಕಹಳ್ಳಿ ಗ್ರಾಮದ ಕ್ರಿ.ಶ.೧೨೮೬ರ ಶಾಸನದಲ್ಲಿ[೩೯] ಶ್ರೀವೀರನಾರಸಿಂಗದೇವರು ಪೃಥ್ವೀರಾಜ್ಯಂಗೆ ಯುತ್ತಿರುವಾಗ ತುಂಗಣಿನಾಡಾಳುವ ಗೌಡನ ಮಗನಾದ ಭೀಮಗೌಡನ ಉಲ್ಲೇಖವಿದೆ. ಈ ಶಾಸನೋಕ್ತ ತುಂಗಣಿನಾಡಿಗೆ ಚನ್ನಪಟ್ಟಣ ತಾಲ್ಲೂಕಿನ ಗರಕಹಳ್ಳಿಯು ಸೇರಿತ್ತು ಎನ್ನಬಹುದು.

ಅಲ್ಲದೆ ತಾಲ್ಲೂಕಿನ ಇಗ್ಗಲೂರು ಗ್ರಾಮದ ಶಾಸನವೊಂದರಲ್ಲಿ[೪೦] ಹೊಯ್ಸಳರ ಆಳ್ವಿಕೆಯಲ್ಲಿ ಕೆಳಲೆನಾಡ ತೆಂಬಾಗ ಇಗ್ಗಲೂರು ಅಸ್ತಿತ್ವದಲ್ಲಿರುವುದನ್ನು ಸೂಚಿಸುತ್ತದೆ. ಈ ಶಾಸನದಲ್ಲಿ ಇಗ್ಗಲೂರಿನ ಗಾಮುಂಡರಾದ ಭೀಮಗೌಡ, ಕೆಂಪಏಚಗೌಡನ ಮಗ ಮಂಚಗೌಡ, ಕೇತಗೌಂಡನ ಮಗ ಮಸಳೆಗೌಡರ ಉಲ್ಲೇಖವಿದೆ. ಜೊತೆಗೆ ಬೇವೂರುಮಂಡ್ಯ ಗ್ರಾಮದ ಕ್ರಿ.ಶ.೧೩೩೮ರ ಶಾಸನದಲ್ಲಿ[೪೧] ಹನುಮನೆಂಬ ವೀರಬಲ್ಲಾಳನ ಸಾಮಂತನ ಉಲ್ಲೇಖವಿದೆ. ಹೊಯ್ಸಳರು ಮೊದಲು ಮಹಾಮಂಡಳೇಶ್ವರರಾಗಿದ್ದು ನಂತರದಲ್ಲಿ ಚಕ್ರವರ್ತಿಗಳಾದವರು. ಇವರ ಆಡಳಿತದಲ್ಲಿ ಸಾಮಂತರಾಗಿದ್ದವರು ಮಹಾಮಂಡಳೇಶ್ವರ ಎಂದು ಕರೆದುಕೊಳ್ಳುವುದು ಅಪರೂಪ. ಜೊತೆಗೆ ಕ್ರಿ.ಶ.೧೩೩೮ರ ಮಾರ್ಚನಹಳ್ಳಿಯ ಶಾಸನವು[೪೨] ಮುಮ್ಮಡಿ ವೀರಬಲ್ಲಾಳ ಆಳ್ವಿಕೆಯಲ್ಲಿದ್ದ ಮರಚಿದೇವರಸ ಎಂಬ ಸಾಮಂತನನ್ನು

---

[೨೮] ರೈಸ್.ಬಿ.ಎಲ್.,(ಸಂ),೧೯೦೫, ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ.೯, ಚನ್ನಪಟ್ಟಣ, ಶಾಸನ ಸಂಖ್ಯೆ.೯೮,ಮಳೂರು, ಪುಟ.೩೨೮

[೨೯] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೬೫, ಯಲಿಯೂರು, ಪುಟ.೩೨೧

[೩೦] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೧೬೦, ಹೊನ್ನಾಯಕನಹಳ್ಳಿ, ಪುಟ.೧೬೬

[೩೧] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೧೨೪, ಕೂಡ್ಲೂರು, ಪುಟ.೧೫೮

[೩೨] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೬೬, ಯಲಿಯೂರು, ಪುಟ.೩೨೧

[೩೩] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೩೬, ಹರೂರು, ಪುಟ.೩೧೦

[೩೪] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೭೬, ಮಳೂರು, ಪುಟ.೩೨೬

[೩೫] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೧೭೧, ಕನ್ನಮಂಗಲ, ಪುಟ.೩೪೬

[೩೬] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೭೨, ಬೇವೂರು, ಪುಟ.೧೪೬

[೩೭] ಅದೇ, ಎಂ.ಎ.ಆರ್–೧೯೪೨, ಶಾಸನ ಸಂಖ್ಯೆ–೨೬, ಪುಟ.೧೨೬

[೩೮] ರೈಸ್.ಬಿ.ಎಲ್.,(ಸಂ),೧೯೦೫,ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ.೯, ರಾಮನಗರ, ಶಾಸನ ಸಂಖ್ಯೆ.೧೩, ಚನ್ನಮಾನಹಳ್ಳಿ, ಪುಟ.೩೦೩

[೩೯] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೫೭, ಗರಕಹಳ್ಳಿ, ಪುಟ.೩೧೯

[೪೦] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೬೨ ಇಗ್ಗಲೂರು, ಪುಟ.೩೨೦

[೪೧] ಅದೇ ಚನ್ನಪಟ್ಟಣ, ಶಾಸನ ಸಂಖ್ಯೆ.೧೬೫, ಬೇವೂರು ಮಂಡ್ಯ, ಪುಟ.೩೪೫

[೪೨] ಅದೇ, ಚನ್ನಪಟ್ಟಣ, ಶಾಸನ ಸಂಖ್ಯೆ.೧೬೮, ಮಾರ್ಚನಹಳ್ಳಿ, ಪುಟ.೩೪೫

ಪ್ರಸ್ತಾಪಿಸುತ್ತದೆ. ಈ ಶಾಸನವು ಸಮಸ್ತ ಮಂಡಲಿಕರಗಂಡ, ಕೆಂಡಲಿಹನಪುತ್ರ ರಾವುತ್ತರಗಂಡ ಎಂದು ಬಿರುದಾಂಕಿತನಾದ ಮರಚಿದೇವರಸರು ಮಾರಚನಹಳ್ಳಿಯ ಕಟಿಕದೇವರಿಗೆ ದಾನ ನೀಡಿದನ್ನು ತಿಳಿಸುತ್ತದೆ. ಅಂತೆಯೇ ತೆಂಕನಹಳ್ಳಿದೊಡ್ಡಿಯ ಕ್ರಿ.ಶ.೧೩೩೮ರ ಶಾಸನವು[೪೩] ಮಹಾಸಾವಂತಾದಿಪತಿ ಮಾರಿಸೆಟ್ಟಿಯ ಗೂಳೆಯನಾಯಕ ಎಂಬ ವೀರಬಲ್ಲಾಳನ ಮಾಂಡಲೀಕನ ಉಲ್ಲೇಖವಿದ್ದು, ಈತ ರಾಯಪ್ಪಸೆಟ್ಟಿ ಎಂಬುವನಿಗೆ ಲಂಕೆರೆಯ ಸ್ಥಳದೊಳಗಣ ನವರಾದಿಯಹಳ್ಳಿಯಲ್ಲಿ ಭೂಮಿಯನ್ನು ದಾನ ಕೊಟ್ಟನು ಎಂಬುದು ತಿಳಿಯುತ್ತದೆ.

ಹೀಗೆ ಚನ್ನಪಟ್ಟಣ ಪ್ರದೇಶದ ಹೊಯ್ಸಳರ ಕಾಲದ ಶಾಸನಗಳನ್ನು ಅವಲೋಕಿಸಿದಾಗ, ಈ ಭಾಗದಲ್ಲಿ ರಾಜರ ನಂತರದಲ್ಲಿ ಮಹಾಮಂಡಲೇಶ್ವರರು, ಮಹಾಸಾಮಂತರು, ಪ್ರಧಾನರು ಆಳ್ವಿಕೆ ನಡೆಸಿದ್ದಾರೆ. ಮಹಾಮಂಡಲೇಶ್ವರಿಗಿಂತ ಮಹಾಸಾಮಂತರು ತಾಲ್ಲೂಕಿನ ಶಾಸನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರು ಆಡಳಿತ ನಿರ್ವಹಣೆಯ ಜೊತೆಗೆ ಸಾಮ್ರಾಜ್ಯ ವಿಸ್ತರಣೆಯಲ್ಲಿಯೂ ಪ್ರಮುಖ ಪಾತ್ರವಹಿಸುತ್ತಿದ್ದರು. ಮೊದಲು ಮಹಾಪ್ರಧಾನ, ದಂಡನಾಯಕರಾಗಿ ಸೇವೆ ಸಲ್ಲಿಸಿದವರನ್ನು ನಂತರ ಮಹಾಸಾಮಂತರಾಗಿ ಬಡ್ತಿ ಪಡೆಯುತ್ತಿದ್ದರು ಎಂಬುದನ್ನು ತಾಲ್ಲೂಕಿನ ಶಾಸನಗಳಲ್ಲಿ ಗುರುತಿಸಬಹುದು. ಅಲ್ಲದೇ ಮಹಾಪ್ರಧಾನ ದಂಡನಾಯಕರಲ್ಲಿ ಕೆಲವರು ಮಹಾಸಾಮಂತರೂ ಆಗಿದ್ದರು ಎಂಬುದನ್ನು ಶಾಸನಗಳಲ್ಲಿ ಗುರುತಿಸಬಹುದು.

## ಪರಾಮರ್ಶನ ಗ್ರಂಥಗಳು

1. ಗೋಪಾಲ,ಬಿ.ಆರ್.(ಸಂ), ೧೯೭೬, *ಎಪಿಗ್ರಾಫಿಯಾ ಕರ್ನಾಟಕ, ಸಂಪುಟ.೫,* ಮೈಸೂರು ಜಿಲ್ಲೆಯ ಶಾಸನಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮೈಸೂರು ವಿಶ್ವವಿದ್ಯಾನಿಲಯ
2. ಹೀರೇಮಠ ,ಗಂಗಾಧರ., ೨೦೧೦, *ಹೊಯ್ಸಳ ಅರಸು ಮನೆತನ : ಒಂದು ಸಾಂಸ್ಕೃತಿಕ ಅಧ್ಯಯನ,* ಧಾರವಾಡ, ನೀಲಪರ್ವತ ಪ್ರಕಾಶನ
3. ನಾಗರಾಜ್.ಎಂ.ಜಿ. ಮತ್ತು ಪಿ.ವಿ.ಕೃಷ್ಣಮೂರ್ತಿ (ಸಂ),೨೦೧೧, *ಇತಿಹಾಸ ದರ್ಶನ, ಸಂಪುಟ–೨೬,* ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾದೆಮಿ
4. ರೈಸ್.ಬಿ.ಎಲ್.,(ಸಂ),೧೯೦೫, *ಎಪಿಗ್ರಾಫಿಯಾ ಕರ್ನಾಟಿಕ,ಸಂಪುಟ.೯,* ಬೆಂಗಳೂರು, ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್
5. ಕೃಷ್ಣರಾವ್,ಎಂ.ವಿ. ಮತ್ತು ಕೇಶವಭಟ್ಟ, ಎಂ.,೧೯೭೦, ಕರ್ನಾಟಕ ಇತಿಹಾಸ ದರ್ಶನ, ಬೆಂಗಳೂರು, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ
6. ಕಾಮತ್, ಸೂರ್ಯನಾಥ ಮತ್ತು ದೇವರಕೊಂಡಾರೆಡ್ಡಿ (ಸಂ), ೧೯೯೪, ಇತಿಹಾಸ ದರ್ಶನ,ಸಂಪುಟ.೯, ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾದೆಮಿ
7. ಸೂರ್ಯನಾಥ ಕಾಮತ್,(ಸಂ), ೧೯೮೯, ಕರ್ನಾಟಕ ರಾಜ್ಯ ಗ್ಯಾಸೆಟಿಯರ್–ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ಗ್ಯಾಸೆಟೀಯರ್ ಇಲಾಖೆ, ಕರ್ನಾಟಕ ಸರ್ಕಾರ
8. ಮಂಜುನಾಥ. ಎಂ.ಕೆ.,೨೦೧೫, ಚನ್ನಪಟ್ಟಣ ತಾಲ್ಲೂಕು : ಸಾಂಸ್ಕೃತಿಕ ಅಧ್ಯಯನ (ಕನ್ನಡ ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಅಪ್ರಕಟಿತ ಮಹಾಪ್ರಬಂಧ).

[೪೩] ಸೂರ್ಯನಾಥಕಾಮತ್, ದೇವರಕೊಂಡಾರೆಡ್ಡಿ(ಸಂ), ಇತಿಹಾಸ ದರ್ಶನ,ಸಂಪುಟ.೯,ಪುಟ.೩೦